**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಶೃಂಗೇರಿ**

**ಸಿ.ಸಿ. ನಂಃ 96/2022**

**ಫಿರ್ಯಾದುದಾರರು** ಃ ಕೆ.ಎಂ. ನಾಗರಾಜ್, ಬಿನ್. ಲೇಟ್ ಕೆ.ವಿ. ಮಾರಿಯಪ್ಪ
ಗೌಡ, ವಯಸ್ಸು ಸುಮಾರು 61 ವರ್ಷ,
ವಾಸಃ ಕಚ್ಚೋಡಿ, ಯಡದಹಳ್ಳಿ ಗ್ರಾಮ,
ನೆಮ್ಮಾರು ಪೋಸ್ಟ್, ಶೃಂಗೇರಿ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

**ಃವಿರುದ್ಧಃ**

**ಆರೋಪಿ** ಃ ಎಂ.ಎಸ್. ಕೀರ್ತೀಷ್ ಮೋಡಲು,
ಬಿನ್. ಶ್ರೀನಿವಾಸ್ ಎಂ. ಎಂ,
ವಯಸ್ಸು ಸುಮಾರು 50 ವರ್ಷ,
ವಾಸಃ ಮೋಡಲು, ಯಡದಹಳ್ಳಿ ಗ್ರಾಮ,
ಕಿಗ್ಗಾ ಹೋಬಳಿ, ಗಂಡಗಟ್ಟ್ ಪೋಸ್ಟ್,
ಶೃಂಗೇರಿ ತಾಲ್ಲೂಕು.

*****

**ಆ ಪಾ ದ ನೆ**

ಆರೋಪಿಯಾದ ನಿಮ್ಮ ವಿರುದ್ಧ ಫಿರ್ಯಾದುದಾರರು ದಾಖಲು ಮಾಡಿರುವ ಫಿರ್ಯಾದು ಏನೆಂದರೆ, ನೀವು ಮತ್ತು ಫಿರ್ಯಾದುದಾರರು ಹಲವಾರು ವರ್ಷಗಳಿಂದ ಪರಿಚಿತರು ಹಾಗೂ ಸ್ನೇಹಿತರಾಗಿದ್ದು, ನೀವು ಫಿರ್ಯಾದುದಾರರಿಂದ ನಿಮ್ಮ ವ್ಯವಹಾರದ ಅವಶ್ಯಕತೆಯ ಉದ್ದೇಶಕ್ಕಾಗಿ ರೂ.1,90,000/- ಗಳನ್ನು 2021 ರ ಫೆಬ್ರವರಿ ತಿಂಗಳಲ್ಲಿ ಸಾಲವಾಗಿ ಪಡೆದಿದ್ದು, ಸದರಿ ಸಾಲದ ಹಣವನ್ನು ಆರು ತಿಂಗಳಲ್ಲಿ ಅವಧಿಯೊಳಗೆ ಮರುಪಾವತಿ ಮಾಡುವುದಾಗಿ ಒಪ್ಪಿ, ನಂತರ ಆರು ತಿಂಗಳು ಬಳಿಕವು ನೀವು ಸದರಿ ಹಣವನ್ನು ಮರುಪಾವತಿ ಮಾಡದೇ ಇದ್ದುದರಿಂದ, ನಿಮ್ಮ ಬಳಿ ಪದೇ ಪದೇ ಸದರಿ ಸಾಲವನ್ನು ಮರುಪಾವತಿಗಾಗಿ ಕೇಳಿದ್ದರಿಂದ ನೀವು ನಿಮ್ಮ ಬ್ಯಾಂಕ್ ಖಾತೆ ಹೊಂದಿರುವ ಚಿಕ್ಕಮಗಳೂರು ಕೊಡಗು ಗ್ರಾಮೀಣ ಬ್ಯಾಂಕ್, ನೆಮ್ಮಾರು ಶಾಖೆಯ ಚೆಕ್ ನಂಃ **0608647** ನ್ನು ದಿನಾಂಕಃ09/11/2021 ರೀತ್ಯಾ

ಚೆಕ್ಕನ್ನು ನೀಡಿ ನಗಧಿಕರಿಸಿಕೊಳ್ಳುವಂತೆ ತಿಳಿಸಿದ್ದು, ಸದರಿಯವರು ದಿನಾಂಕಃ04/02/2022 ರಂದು ಜಮಾವಣೆಗಾಗಿ ಕರ್ನಾಟಕ ಗ್ರಾಮೀಣ ಬ್ಯಾಂಕ್ ನೆಮ್ಮಾರು ಶಾಖೆಗೆ ಹಾಜರುಪಡಿಸಿದಾಗ, ಬ್ಯಾಂಕಿನವರು ನಿಮ್ಮ ಖಾತೆಯಲ್ಲಿ ***In eligible Cheque and Funds insufficient*** ವೆಂಬ ಷರಾದೊಂದಿಗೆ ದಿನಾಂಕಃ04/02/2022 ರಂದು ವಾಪಸ್ಸು ಮಾಡಿರುತ್ತಾರೆ ಹಾಗೂ ಈ ಬಗ್ಗೆ ನಿಮಗೆ ವಕೀಲರ ಮೂಲಕ ದಿನಾಂಕಃ04/03/2022 ರಂದು ನೋಟಿಸನ್ನು ನೀಡಿ, ಸದರಿ ನೋಟಿಸ್ ತಲುಪಿದ 15 ದಿನಗಳೊಳಗೆ ಹಣ ಮರುಪಾವತಿ ಮಾಡಬೇಕೆಂದು ತಿಳಿಸಿದರೂ ಸಹ ನೀವು ಆರೋಪಿ ಸದರಿ ಚೆಕ್ಕಿನ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ ನೀವು ಆರೋಪಿ ಫಿರ್ಯಾದುದಾರರಿಗೆ ಮೋಸ ಮಾಡಬೇಕೆನ್ನುವ ಉದ್ದೇಶದಿಂದ ಈ ರೀತಿಯ ಚೆಕ್ಕನ್ನು ನೀಡಿ ವರ್ಗಾವಣೆಯ ಲಿಖಿತ ಕಾಯ್ದೆ ಕಲಂ 138 ಮತ್ತು 420 ಐ.ಪಿ.ಸಿ ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಪ್ರಶ್ನೆ. 1 ಃ ಈಗ ಓದಿ ಹೇಳಿದ ಆಪಾದನೆ ತಿಳಿಯಿತೇ?
ಉತ್ತರ ಃ

ಪ್ರಶ್ನೆ.2 ಃ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕಾ?
ಉತ್ತರಃ

ಈ ಮೇಲ್ಕಂಡ ಆಪಾದನೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಡೀಕರಿಸುತ್ತೇನೆ.

ದಿನಾಂಕ ಃ 17-01-2023

**(ದಾಸರಿ ಕ್ರಾಂತಿ ಕಿರಣ್)**
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಶೃಂಗೇರಿ.

<u>ಆರೋಪಿಯ ಸಹಿಃ</u>